| ಕರ್ನಾಟಕ ಸರ್ಕಾರ | | | (ಸಿ.ಆರ್.ಪಿ-67) |
| --- | --- | --- | --- |
| ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4 | ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ | | |
| | ಸಿ.ಸಿ ನಂ. 564/2018 | | |
| | | ಸಿ.ಡಬ್ಲೂ | 15 |
| | | ಪಿ.ಡಬ್ಲೂ | 7 |
| ಸಾಕ್ಷಿದಾರರ ಹೆಸರು | ಸಿ. ಸತೀಶ್ ಬಿನ್ ಚಿಕ್ಕಯ್ಯ | | |
| ವಯಸ್ಸು | 46 ವರ್ಷ | | |
| ಉದ್ಯೋಗ | ಪಿ.ಐ. ಡಿ.ಜಿ. ಮತ್ತು ಐ.ಜಿ.ಪಿ. ಕಛೇರಿ, ಬೆಂಗಳೂರು | | |
| ವಾಸಸ್ಥಳ | ಬೆಂಗಳೂರು | | |

**ದಿನಾಂಕಃ- 04.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ನಾನು ದಿ**. 18.12.2017** ರಿಂದ ದಿ**. 16.09.2019** ರವರೆಗೆ ಚನ್ನಪಟ್ಟಣದ ಪುರ ವೃತ್ತ ನಿರೀಕ್ಷಕರಾಗಿ ಕರ್ತವ್ಯ ಮಾಡಿರುತ್ತೇನೆ**.**

**2)** ಈ ಪ್ರಕರಣದ ಕಡತವನ್ನು ಚಾಸಾ**-14** ರವರಿಂದ ಪಡೆದು ಪರಿಶೀಲನೆ ಮಾಡಿರುತ್ತೇನೆ**.** ಚಾಸಾ**-2** ಮತ್ತು **3** ರವರ ಹೇಳಿಕೆಗಳನ್ನು ಪಡೆದಿರುತ್ತೇನೆ**.** ಮೃತನ ಪಿಎಂ ವರದಿ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ**.** ಲಾರಿ ಮಾಲೀಕನಿಗೆ ನೋಟೀಸನ್ನು ನೀಡಿರುತ್ತೇನೆ**.** ದಿಃ**14.02.2018** ರಂದು ಅಪಘಾತಕ್ಕೊಳಪಟ್ಟ ಕೆ.ಎಲ್**17.**ಡಿ**.0607** ನೇದ್ದರ ವಾಹನದ ಮಾಲೀಕನ ಹೇಳಿಕೆ ಪಡೆದಿರುತ್ತೇನೆ**.** ಮುಚ್ಚಳಿಕೆ ಪತ್ರ ಪಡೆದು ವಾಹನ ಬಿಡುಗಡೆ ಮಾಡಿರುತ್ತೇನೆ**.** ದಿಃ**16.05.2018** ರಂದು ಚಾಸಾ**-10** ರವರ ಹೇಳಿಕೆಯನ್ನು ದಾಖಲು ಮಾಡಿ**,** ಮುಚ್ಚಳಿಕೆ ಪತ್ರ ಪಡೆದು ವಾಹನ ಬಿಡುಗಡೆ ಮಾಡಿರುತ್ತೇನೆ**.** ಅದೇ ದಿನ ಆರೋಪಿತನು ಠಾಣೆಗೆ ಹಾಜರಾಗಿದ್ದು ಅವರನ್ನು ದಸ್ತಗಿರಿ ನಿಯಮ ಪಾಲಿಸಿ, ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಾನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ ವ್ಯಕ್ತಿಯನ್ನು ನೋಡಿದರೆ ಗುರ್ತಿಸುತ್ತೇನೆ. ಐ.ಎಂ.ವಿ ವರದಿ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಪ್ರಕರಣದ ತನಿಖೆ ಮುಗಿದಿದ್ದು

ಆರೋಪಿತನ ಮೇಲೆ ದೋಷಾರೋಪಣೆ ಪತ್ರ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಶವಪರೀಕ್ಷಾ ವರದಿಯನ್ನು ನಿಪಿಃ 8 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 8(ಎ) ಎಂದು ಗುರ್ತಿಸಲಾಯಿತು. ಐ.ಎಂ.ವಿ ವರದಿಯು ನಿಪಿಃ 4 ರಂತೆ ಇದ್ದು, ಸಾಕ್ಷಿಯ ಸಹಿಯನ್ನು ನಿಪಿಃ 4(ಬಿ) ಎಂದು ಗುರ್ತಿಸಲಾಯಿತು.

**ಮರು ವಿಚಾರಣೆಃ- ಇಲ್ಲ.**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಆರ್.ಎಸ್. ವಕೀಲರಿಂದ</u>**

1) ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಮೃತನ ಕುಟುಂಬಕ್ಕೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಐ.ಎಂ.ವಿ ವರದಿ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಯಾವುದೇ ತಪ್ಪು ಇರದಿದ್ದರೂ ಸಹ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು)

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು
ಚನ್ನಪಟ್ಟಣ.